# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 437 |
| 2 | ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 16-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಬಹು ಅಂತಸ್ತಿನ ಬೃಹತ್ ವಸತಿ ಸಮುಚ್ಛಯಗಳನ್ನು ಮತ್ತು ಶಾಪಿಂಗ್ ಮಾಲ್‌ಗಳನ್ನು ನಿರ್ಮಾಣ ಮಾಡಲು ಇರುವ ಮಾನದಂಡಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂದಿಸಿದಂತೆ ಬೃಹತ್ ವಸತಿ ಸಮುಚ್ಛಗಳನ್ನು ಮತ್ತು ಶಾಪಿಂಗ್ ಮಾಲ್‌ಗಳನ್ನು ನಿರ್ಮಾಣ ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ;<br>➢ ನಿವೇಶನದ ವಿಸ್ತೀರ್ಣ 20,000 ಚ.ಮೀ ಗಿಂತ ಹೆಚ್ಚಿಗೆ ಇದ್ದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಪಡೆದು ಅವಶ್ಯಕತೆಗನುಗುಣವಾಗಿ ವಿವಿಧ ಇಲಾಖೆಗಳಿಂದ ನಿರಾಪೇಕ್ಷಣಾ ಪತ್ರವನ್ನು ಸಲ್ಲಿಸಿದ ನಂತರ ಪರಿಷ್ಕೃತ ಮಹಾ ಯೋಜನೆ-2015ರ ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿ-2003ರಲ್ಲಿ ಇರುವ ನಿಯಮಗಳನ್ವಯ ಅನುಮತಿ ನೀಡಲಾಗುತ್ತಿದೆ.<br>➢ ನಿವೇಶನದ ವಿಸ್ತೀರ್ಣ 20,000 ಚ.ಮೀ ಗಿಂತ ಕಡಿಮೆ ಇದ್ದಲ್ಲಿ ಪಾಲಿಕೆಯಲ್ಲಿಯೇ ವಿವಿಧ ಇಲಾಖೆಗಳಿಂದ ಅವಶ್ಯಕತೆಗನುಗುಣವಾಗಿ ನಿರಾಪೇಕ್ಷಣಾ ಪತ್ರವನ್ನು ಸಲ್ಲಿಸಿದ ನಂತರ ಪರಿಷ್ಕೃತ ಮಹಾ ಯೋಜನೆ-2015ರ ವಲಯ ನಿಯಮಾವಳಿ ಹಾಗೂ ಕಟ್ಟಡ ಉಪವಿಧಿ-2003 ರಲ್ಲಿ ಇರುವ ನಿಯಮಗಳನ್ವಯ ಅನುಮತಿ ನೀಡಲಾಗುತ್ತಿದೆ. |
| ಆ) | ಬೆಂಗಳೂರು ಅಭಿವೃದ್ಧಿ ದೃಷ್ಟಿಯಿಂದ ಯೋಜಿತ ರೂಪು-ರೇಷೆಗಳಂತೆ ಬೃಹತ್ ವಸತಿ ಸಮುಚ್ಛಯಗಳು ಮತ್ತು ಶಾಪಿಂಗ್ ಮಾಲ್‌ಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತಿದೆಯೇ: (ಹಾಗಿದ್ದಲ್ಲಿ ಯೋಜಿತ ರೂಪುರೇಷೆಗಳ ಬಗ್ಗೆ ಸಂಪೂರ್ಣ ಮಾಹಿತಿ ಒದಗಿಸುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಮಹಾ ಯೋಜನೆ ಮತ್ತು ವಲಯ ನಿಯಮಾವಳಿಯನ್ನು ತಯಾರಿಸಿದ್ದು, ಸದರಿ ಮಹಾ ಯೋಜನೆಯಲ್ಲಿ (RMP-2015) ವಿವಿಧ ಚಟುವಟಿಕೆಗಳಿಗೆ ನಿಯಮಾವಳಿಯಡಿಯಲ್ಲಿ ಭೂ ಉಪಯೋಗಗಳ ಅನುಸಾರ ಪಾಲಿಕೆಯ ನಗರ ಯೋಜನಾ ವಿಭಾಗಕ್ಕೆ ಸರ್ಕಾರಿ / ಖಾಸಗಿ ವಸತಿ ಸಮುಚ್ಚಯಗಳು ಮತ್ತು ವಾಣಿಜ್ಯ (ಶಾಪಿಂಗ್ ಮಾಲ್) ಉದ್ದೇಶಗಳ ನಿರ್ಮಾಣಕ್ಕೆ ಅನುಮತಿ ಕೋರಿ ಪ್ರಸ್ತಾವನೆಯು ಬಂದಿದಲ್ಲಿ, ನಿಯಮಗಳ ಅಡಿಯಲ್ಲಿ ಪರಿಶೀಲಿಸಿ ಅನುಮತಿ ನೀಡಲಾಗುತ್ತಿರುತ್ತದೆ. |

...2.

| | | |
|---|---|---|
| ಇ) | ಬೃಹತ್ ವಸತಿ ಸಮುಚ್ಛಯಗಳು ಹಾಗೂ ಶಾಪಿಂಗ್ ಮಾಲ್‌ಗಳ ನಿರ್ಮಾಣಕ್ಕೆ ಸರ್ಕಾರದ ಯಾವ ಯಾವ ಇಲಾಖೆಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ ಮತ್ತು ಅನುಮತಿ ನೀಡಲು ಇರುವ ಷರತ್ತು ಮತ್ತು ನಿಬಂಧನೆಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವಸತಿ ಸಮುಚ್ಚಯ ಹಾಗೂ ಶಾಪಿಂಗ್ ಮಾಲ್‌ಗಳ ನಿರ್ಮಾಣಕ್ಕೆ ಅವಶ್ಯಕತೆಗನುಗುಣವಾಗಿ ಈ ಕೆಳಕಂಡ ಇಲಾಖೆ/ ಪ್ರಾಧಿಕಾರಗಳಿಂದ ನಿರಾಪೇಕ್ಷಣಾ ಪತ್ರವನ್ನು ಪಡೆಯಬೇಕಾಗಿರುತ್ತದೆ.<br>➢ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>➢ ಕರ್ನಾಟಕ ರಾಜ್ಯ ಅಗ್ನಿ ಶಾಮಕ ಇಲಾಖೆ<br>➢ ಬೆಂಗಳೂರು ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿ<br>➢ ಭಾರತೀಯ ವೈಮಾನಿಕ ಪ್ರಾಧಿಕಾರ / ಹೆಚ್.ಎ.ಎಲ್ / ಜಕ್ಕೂರು ಫ್ಲೇಯಿಂಗ್ ಸ್ಕೂಲ್ / ಯಲಹಂಕ ಏರ್‌ಫೋರ್ಸ್ (ವ್ಯಾಪ್ತಿಗೆ ಒಳಪಟ್ಟದ್ದಲ್ಲಿ)<br>➢ ಕರ್ನಾಟಕರಾಜ್ಯ ಪರಿಸರ ತಿರುವಳಿ ಸಮಿತಿ<br>➢ ಬೆಂಗಳೂರು ಮೆಟ್ರೋ ನಿಗಮ ನಿಯಮಿತ<br>➢ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ<br>➢ ಭಾರತ ಸಂಚಾರ ನಿಗಮ ನಿಯಮಿತ |
| ಈ) | ಈ ರೀತಿ ನಿರ್ಮಾಣವಾಗುವ ವಸತಿ ಸಮುಚ್ಛಯಗಳಿಂದ ಭವಿಷ್ಯದಲ್ಲಿ ನೀರು ಮತ್ತು ಅಂತರ್ಜಲ ಮಟ್ಟದಲ್ಲಿ ಕುಸಿತ, ಹೆಚ್ಚಿದ ವಾಹನಗಳಿಂದ ಸಂಚಾರಿ ದಟ್ಟಣೆ ಮುಂತಾದ ಮೂಲಭೂತ ಸೌಲಭ್ಯಗಳ ಸಮಸ್ಯೆಗಳು ಉಂಟಾಗುವ ಸಾಧ್ಯತೆಯಿರುವುದರಿಂದ ಇಂತಹ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಕಂಡುಕೊಳ್ಳಲಾಗಿದೆಯೇ; ಹಾಗಿದ್ದಲ್ಲಿ, ಯಾವ ರೀತಿಯ ಪರಿಹಾರೋಪಾಯಗಳನ್ನು ಕಂಡುಕೊಳ್ಳಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು) | ಈ ಸಂಬಂಧ ಈ ಕೆಳಕಂಡ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>➢ ನಕ್ಷೆ ಅನುಮೋದನೆ ಸಂದರ್ಭದಲ್ಲಿ R.M.P.–2015ರ ವಲಯ ನಿಯಮಾವಳಿಗಳು 3.16 (13) ಮತ್ತು ಕಟ್ಟಡ ಉಪ ವಿಧಿಗಳು ನಿಯಮ 32 ರಂತೆ 240.00 ಚ.ಮೀ ಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಾಣವಾಗುವ ಕಟ್ಟಡಗಳಲ್ಲಿ ಕಡ್ಡಾಯವಾಗಿ ಮಳೆನೀರು ಕೊಯ್ಲು ಪದ್ಧತಿ ಅಳವಡಿಸಿ ನಕ್ಷೆ ಅನುಮೋದಿಸಲಾಗುತ್ತಿದೆ ಹಾಗೂ ಸ್ವಾಧಿನಾನುಭವ ಪ್ರಮಾಣಪತ್ರ ನೀಡುವ ಮುನ್ನ ಸದರಿ ಸೌಲಭ್ಯವನ್ನು ಅಳವಡಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳಲಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರು ನೀಡುವ ನಿರಾಕ್ಷೇಪಣಾ ಪತ್ರದಂತೆ ಎಸ್.ಟಿ.ಪಿ ಅಳವಡಿಸಿಕೊಂಡು ಅನುಮೋದನೆ ನೀಡಲಾಗುತ್ತಿದೆ.<br>➢ ಬೆಂಗಳೂರು ಒಳಚರಂಡಿ ಮತ್ತು ನೀರು ಸರಬರಾಜು ಮಂಡಳಿ ರವರಿಂದ ಪಡೆದ ನಿರಾಕ್ಷೇಪಣಾ ಪತ್ರ ನೀಡಿದ ನಂತರವೇ ಈ ರೀತಿ ಕಟ್ಟಡಕ್ಕೆ ಅನುಮತಿ ನೀಡಲಾಗುತ್ತಿದೆ.<br>➢ ಪಾಲಿಕೆಯ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ (T.E.C) ರವರು ಸಂಚಾರ ದಟ್ಟಣೆ ಬಗ್ಗೆ ವರದಿಯನ್ನು ಪಡೆದು ಸಂಚಾರ ಒತ್ತಡವಿರುವ ಪ್ರದೇಶಗಳಲ್ಲಿ ಅವಶ್ಯವಿದ್ದಲ್ಲಿ ರಸ್ತೆ ಅಗಲೀಕರಣ, ಮೇಲು ಸೇತುವೆ, ಅಂಡರ್ ಪಾಸ್‌ಗಳ ನಿರ್ಮಾಣದ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಉ) | ಅನಧಿಕೃತ ಬೃಹತ್ ವಸತಿ ಸಮುಚ್ಚಯಗಳು ಮತ್ತು ಶಾಪಿಂಗ್ ಮಾಲ್‌ಗಳು ನಿರ್ಮಾಣವಾಗುತ್ತಿದ್ದಲ್ಲಿ ಅವುಗಳನ್ನು ಪತ್ತೆ ಹಚ್ಚಲು ಮತ್ತು ನಿರ್ಮಾಣ ಕಾಮಗಾರಿಯನ್ನು ತಡೆಯಲು ಯಾವ ರೀತಿ ಕ್ರಮವಹಿಸಲಾಗುವುದು? (ಸಂಪೂರ್ಣ ವಿವರ ಒದಗಿಸುವುದು) | ಈ ಸಂಬಂದ ಬಿಬಿಎಂಪಿಯು ಹೊರಡಿಸಿರುವ ದಿನಾಂಕ: 21-07-2022ರ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |

**ನಅಇ 87 ಎಂಎನ್‌ಯು 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ